**<u>ಸಾಕ್ಷಿಗೆ ದಿನಾಂಕಃ 13.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀ.KGB ರವರಿಂದಃ</u>**

1) ನಾನು ಈ ಪ್ರಕರಣದಲ್ಲಿ ಸಾಕ್ಷಿದಾರನಾಗಿದ್ದೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಬದಲಾಗಿ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಗೆ ಅನುಸಾರವಾಗಿ ನಮ್ಮ ವಕೀಲರು ಸಿದ್ಧಪಡಿಸಿದ್ದಾರೆ.

2) ನ್ಯಾಯಾಲಯವು ಕಳುಹಿಸಿದ್ದ ಸಮನ್ಸ್ ನಲ್ಲಿ ನಮೂದು ಮಾಡಿದ್ದಂತಹ ದಾಖಲೆಗಳನ್ನು ನಾನು ಈ ದಿನ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ.

3) ಅನುಮತಿ ಪತ್ರವನ್ನು **ನಿ.ಪಿ.23** ಎಂದು ಗುರುತಿಸಿದೆ.

4) **Bhagavan Mahaveer Jain hospital** ನಲ್ಲಿ ಇಟ್ಟಿರುವಂತಹ **Medico Legal Case Register** ಅನ್ನು ಮತ್ತು **police intimation** ದಾಖಲೆಗಳನ್ನು ಮತ್ತು ಇದೆ

ದಾಖಲೆಗಳಲ್ಲಿ ದಿಃ **13.12.2024** ರಂದು ಓರ್ವ Inayath Ulla Shariff ಎಂಬ ವ್ಯಕ್ತಿಗೆ ಸಂಬಂಧಿಸಿದಂತಹ ಮಾಹಿತಿಗಳನ್ನು ಬರೆದಿರುವಂತಹ ಹಾಳೆಗಳ ಯಥಾ ನಕಲುಗಳನ್ನು ಈ ಸಾಕ್ಷಿದಾರರು ಹಾಜರುಪಡಿಸಿದ್ದಾರೆ. ಸದರಿ ಮೂಲ ದಾಖಲೆಗಳನ್ನು ಮತ್ತು ನಕಲುಗಳನ್ನು ಹೋಲಿಕೆ ಮಾಡಿ ನೋಡಲಾಗಿ ಈ ಮೂಲ ದಾಖಲೆಗಳನ್ನು ಆಧಾರವಾಗಿ ಇಟ್ಟುಕೊಂಡು ಯಾಂತ್ರಿಕ ಸಹಾಯದಿಂದ ಈ ಪ್ರತಿಗಳನ್ನು ಸಿದ್ಧಪಡಿಸಿದ್ದಾರೆ ಎಂದು ಕಂಡು ಬರುತ್ತದೆ. ಆದ ಕಾರಣದಿಂದ ಸದರಿ ನಕಲುಗಳನ್ನು ನಿ.ಪಿ.**24** ಮತ್ತು ನಿ.ಪಿ.**25** ಎಂದು ಗುರುತಿಸಿದೆ ಮತ್ತು ಮೂಲ ದಾಖಲೆಗಳನ್ನು ಈ ಸಾಕ್ಷಿದಾರರಿಗೆ ವಾಪಸ್ಸು ನೀಡಿದೆ.

5) ಓರ್ವ Inayath Ulla Shariff ಎಂಬ ವ್ಯಕ್ತಿಯು ನಮ್ಮ ಆಸ್ಪತ್ರೆಗೆ ಯಾವಾಗ ದಾಖಲು ಆಗಿದ್ದಾರೆ ಮತ್ತು ಆತನಿಗೆ ಯಾವ ರೀತಿಯ ಗಾಯಗಳು ಆಗಿದ್ದವು ಮತ್ತು ಆತನಿಗೆ ಯಾವ ರೀತಿಯ ಚಿಕಿತ್ಸೆಯನ್ನು ಕೊಡಲಾಗಿದೆ ಎಂಬ ಎಲ್ಲಾ ಮಾಹಿತಿಗಳನ್ನು ಒಳಗೊಂಡಿರುವಂತಹ ಒಂದು ಫೈಲ್ ಹಾಜರುಪಡಿಸಿದ್ದು ಅದನ್ನು ನಿ.ಪಿ.**26** ಎಂದು ಗುರುತಿಸಿದೆ.

6) **Outpatient** ಫೈಲ್ ಅನ್ನು ಸಹಾ ಹಾಜರುಪಡಿಸಿದ್ದು ಅದನ್ನು ನಿ.ಪಿ.**27** ಎಂದು ಗುರುತಿಸಿದೆ.

SCCH – 01
MVC No. 2540 OF 2025
PW2

**<u>ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀಮತಿ.ಎಸ್.ಎಲ್.ಎಂ. ವಕೀಲರಿಂದಃ</u>**

1) ಕೇವಲ ಅರ್ಜಿದಾರರಿಗೆ ಸಹಾಯ ಮಾಡಬೇಕು ಎಂಬ ಉದ್ದೇಶದಿಂದ ನಾನು ನಿ.ಪಿ.**23** ರಿಂದ ನಿ.ಪಿ.**27** ಎಂದು ಗುರುತು ಆಗಿರುವ ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು.

**<u>ಪಾಟೀ ಸವಾಲು: 1 ನೇ ಎದುರುದಾರರ ಪರವಾಗಿಃ</u>**

ಎದುರುದಾರರು ಮತ್ತು ಎದುರುದಾರರ ಪರ ವಕೀಲರು ಹಾಜರಿಲ್ಲ. ಆದ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.